ಬೆಂಗಳೂರು - ಬಳ್ಳಾರಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವುದು

123 (1566) ಶ್ರೀಮತಿ ಕೆ.ವಿ.ಅನುಸೂಯಮ್ಮ ನಟರಾಜನ್ (ಚಿಕ್ಕಬಳ್ಳಾಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಉಚ್ಚ ನ್ಯಾಯಾಲಯದ ದಿನಾಂಕ 01-12-1999ರ ಆದೇಶದಂತೆ ಬೆಂಗಳೂರು ಬಳ್ಳಾರಿ ರಾಷ್ಟ್ರೀಯ ಹೆದ್ದಾರಿ ಮಧ್ಯಭಾಗದಿಂದ 40 ಮೀಟರ್ ದೂರದವರೆಗೆ ಅನಧಿಕೃತ ಕಟ್ಟಡಗಳನ್ನು ದೂರ ಮಾಡಲು ತಿಳಿಸಿದ್ದು, ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಆ) ನಗರ ಪ್ರದೇಶಗಳಿರುವ ಕಡೆ ಬೈಪಾಸ್ ಮಾಡಲು ಅವಕಾಶವಿದೆಯೇ? ಇದ್ದಲ್ಲಿ ಚಿಕ್ಕಬಳ್ಳಾಪುರ ನಗರದಲ್ಲಿ ನಿರ್ಮಿಸಲಾಗುವುದೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಕರ್ನಾಟಕ ಉಚ್ಚ ನ್ಯಾಯಾಲಯದ ದಿನಾಂಕ 01-12-1999ರ ಆದೇಶದಂತೆ ರಾಷ್ಟ್ರೀಯ ಹೆದ್ದಾರಿ-7ರ ಮಧ್ಯರೇಖೆಯಿಂದ 40 ಮೀ ಅಂತರದವರೆಗೆ ಅನಧಿಕೃತ ಕಟ್ಟಡಗಳನ್ನು, ಗೂಡು ಅಂಗಡಿಗಳನ್ನು, ಕಾಂಪೌಂಡ್ ಗೋಡೆಗಳನ್ನು ಹಾಗೂ ಇತರೆ ತಾತ್ಕಾಲಿಕ ನಿರ್ಮಾಣಗಳು ಸೇರಿದಂತೆ ಸುಮಾರು 150ರಷ್ಟು ಅತಿಕ್ರಮಗಳನ್ನು ತೆರವುಗೊಳಿಸಲಾಗಿದೆ.

ಆ) ಹೌದು. ನಗರ ಪ್ರದೇಶಗಳಿರುವ ಇಡೆ ಬೈಪಾಸ್ ನಿರ್ಮಿಸಲು ಅವಕಾಶವಿರುತ್ತದೆ. ಆದರೆ ಚಿಕ್ಕಬಳ್ಳಾಪುರ ನಗರಕ್ಕೆ ಬೈಪಾಸ್ ನಿರ್ಮಿಸುವ ಯೋಜನೆ ಸಧ್ಯಕ್ಕೆ ಇರುವುದಿಲ್ಲ.

ಶ್ರೀಮತಿ ಕೆ.ವಿ. ಅನುಸೂಯಮ್ಮ ನಟರಾಜನ್ : ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಉತ್ತರವನ್ನು ಒದಗಿಸಿದ್ದಾರೆ. ಬೆಂಗಳೂರು-ಬಳ್ಳಾರಿ ರಾಷ್ಟ್ರೀಯ ಹೆದ್ದಾರಿಯಲ್ಲಿ ರಾಜ್ಯ ಉಚ್ಚನ್ಯಾಯಾಲಯದ ಆದೇಶದಂತೆ 40 ಮೀಟರ್‌ಗಳಷ್ಟು ಅಗಲವಾಗಿರುವುದು ನನಗೆ ತುಂಬಾ ಹೆಮ್ಮೆ ತರುವ ಹಾಗೂ ಸಂತೋಷವಾದ ವಿಷಯವಾಗಿದೆ. ಆದರೆ ನನ್ನ ಎರಡನೇ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ನಾಗರೀಕರಿಗೆ, ಅನೇಕ ವ್ಯಾಪಾರಸ್ಥರಿಗೆ, ನಿರುದ್ಯೋಗಿಗಳಿಗೆ ಕೆಲಸ ಕೊಟ್ಟಿರುವ ಕಾರ್ಖಾನೆಗಳಿಗೆ, ಹಾಗೂ ಸನ್ಮಾನ್ಯ ವಿಶ್ವೇಶ್ವರಯ್ಯನವರು ಓದಿರುವ ಹೈಸ್ಕೂಲ್‌ಗೆ ತೊಂದರೆಯಾಗದಂತೆ ಚಿಕ್ಕಬಳ್ಳಾಪುರದ ನಗರದ ಹಿತದೃಷ್ಟಿಯಿಂದ ಅಲ್ಲಿ ಬೈಪಾಸ್ ರಸ್ತೆಯನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ಸವಿನಯ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೇ, ಅವರ ಮೊದಲನೇ ಪ್ರಶ್ನೆಗೆ ನಾವು ಉತ್ತರವನ್ನು ಕೊಟ್ಟಿದ್ದೇವೆ, ಆದರಿಂದ ಮಾನ್ಯ ಸದಸ್ಯರಿಗೆ ತೃಪ್ತಿಯಾಗಿದೆ. ನನ್ನ ಎರಡನೇ ಪ್ರಶ್ನೆಗೆ ಉತ್ತರವಾಗಿ ಅಲ್ಲಿ ಬೈಪಾಸ್ ರಸ್ತೆ ಮಾಡತಕ್ಕಂಥ ವಿಚಾರವು ಸರಕಾರದ ಪರಿಶೀಲನೆಯಲ್ಲಿದೆ. ಆದರೆ ಇನ್ನೂ ಖಚಿತವಾಗಿ ಅದರ ಬಗ್ಗೆ ನಿರ್ಣಯವನ್ನು ತೆಗೆದುಕೊಂಡಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, ಪಟ್ಟಣ ಪ್ರದೇಶಗಳಲ್ಲಿ 40 ಮೀಟರ್‌ಗಳಷ್ಟು ರಸ್ತೆ ಅಗಲ ಮಾಡುವುದನ್ನು ಮರುಪರಿಶೀಲಿಸಿ ಅದನ್ನು ಬೇರೆ ಕಡೆ ಮಾಡುವ ಬಗ್ಗೆ ಕೂಡ ವಿಚಾರ ಮಾಡಬೇಕು. ನಮ್ಮಲ್ಲಿ ಹೈವೇಸ್ ಹಾದು ಹೋಗುತ್ತದೆ. ಈಗಾಗಲೇ ಪಕ್ಕದಲ್ಲಿಯೇ ಪಟ್ಟಣ ಪ್ರದೇಶದಲ್ಲಿ ಅಂಗಡಿಮುಗ್ಗಟ್ಟುಗಳು ಬಂದು ಬಿಟ್ಟಿವೆ. ಅವುಗಳನ್ನು ಸಂಪೂರ್ಣವಾಗಿ ಒಡೆದು ಹಾಕುವುದು ಕಷ್ಟವಾಗುತ್ತದೆ. ಅದೇ ಔಟರ್ ಏರಿಯಾಗಳಲ್ಲಿ 40 ಮೀಟರ್ ರಸ್ತೆ ಅಗಲ ಮಾಡಿಕೊಂಡು ಹೋಗಬಹುದು. ಉಳಿದ ಕಡೆಗಳಲ್ಲಿ 20 ಮೀಟರ್‌ಗಳಷ್ಟು ಮಾಡಿಕೊಂಡು, ಇರುವಂಥಾದ್ದನ್ನು ಹಾಗೆಯೇ ಉಳಿಯುವಂತೆ ಅವಕಾಶವಾದರೆ ಒಳ್ಳೆಯದು ಅಂಥ ಪ್ರಸ್ತಾವನೆಯು ಸರಕಾರದ ಪರಿಶೀಲನೆಯಲ್ಲಿ ಇದೆಯೇ ಎಂದು ಕೇಳಬಯಸುತ್ತೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ ಸಾಮಾನ್ಯವಾಗಿ ಇದು ಎಲ್ಲಾ ಕಡೆಗಳಲ್ಲಿಯೂ ಉದ್ಭವಿಸುವ ಪ್ರಶ್ನೆ. ಅಲ್ಲದೇ ಸರಕಾರದವರು ಕೊಡುವ ಪರಿಹಾರದ ಮೊತ್ತವು ಕೂಡ ಅವರ ಸಲಹೆಯ ಪ್ರಕಾರ ಉಳಿಯುತ್ತದೆ. ಅದನ್ನು ಕೂಡ ಯೋಚನೆ ಮಾಡಬಹುದು. ಏಕೆಂದರೆ ಪರಿಹಾರದ ಮೊತ್ತವು ಸಾವಿರಾರು ಕೋಟಿ ರೂಪಾಯಿಗಳವರೆಗೆ ಆಗಬಹುದು.....

ಶ್ರೀ ಧರ್ಮಸಿಂಗ್ : ಇದು ಬಹಳ ಮಹತ್ವವಾದಂಥಾದ್ದು ಮತ್ತು ಇತ್ತೀಚಿನ ದಿವಸಗಳಲ್ಲಿ ಎಲ್ಲಾ ಕಡೆಗಳಲ್ಲಿ ಅನಧಿಕೃತ ಕಟ್ಟಡಗಳನ್ನು ಡಿಮಾಲಿಶ್ ಮಾಡುತ್ತಿದ್ದಾರೆ ಎಂದು ಜನರ ಮನಸ್ಸಿನಲ್ಲಿ ಬಂದಿದೆ. ಶ್ರೀಮತಿ ಅನಸೂಯಮ್ಮನವರು ಪ್ರಶ್ನೆಯ ಪ್ರಕಾರ ಸುಮಾರು ಇಂಥ 150 ರಷ್ಟು ಅತಿಕ್ರಮಗಳನ್ನು ನಾವು ತೆರವು ಮಾಡಿದ್ದೇವೆ. ಎರಡನೆಯದಾಗಿ ನೀವು ನಗರ ಪ್ರದೇಶಗಳಲ್ಲಿ ಡೆಮಾಲಿಶನ್ ಮಾಡಲು ಹೊರಟರೆ ಅದರಿಂದ ಜನರಿಗೆ ಬಹಳ ತೊಂದರೆಯಾಗುತ್ತದೆ ಎಂಬ ಅಭಿಪ್ರಾಯ ಸಹ ಇದೆ. ಅದರ ಬಗ್ಗೆ ಸರಕಾರ ಒಂದು ಕ್ರಮವನ್ನು ತೆಗೆದುಕೊಂಡಿದೆ. ಇಂಟರ್‌ನಲ್ ಡಿಪಾರ್ಟ್‌ಮೆಂಟಗ ಕಮಿಟಿಯನ್ನು ಮಾಡಿದ್ದೇವೆ.

ಇವೊತ್ತು ಅಡಿಷನಲ್ ಚೀಫ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಕಮಿಟಿ ಮಾಡಿದ್ದು, ಅದರಲ್ಲಿ ಹೆಚ್‌ಯುಡಿ ಸಕ್ರೆಟರಿ, ಪಿಡಬ್ಲ್ಯೂಡಿ ಸೆಕ್ರೆಟರಿ, ಫೈನಾನ್ಸ್ ಸೆಕ್ರೆಟರಿಯವರುಗಳು ಇರುತ್ತಾರೆ. ಜಸ್ಟೀಸ್ ಠಾಕೂರ್‌ರವರು ನಮಗೆ ಒಂದು ಆದೇಶವನ್ನು ಕೊಟ್ಟಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ ಇರತಕ್ಕಂಥ ಕಡೆಗಳಲ್ಲಿ ಏನು ಎನ್‌ಕ್ರೋಚ್‌ಮೆಂಟ್ ಆಗಿದೆ, ಸದರಿ ರಸ್ತೆಗಳನ್ನು ಅಗಲಗೊಳಿಸುವಾಗ ಇವುಗಳನ್ನು ತೆರವುಗೊಳಿಸಬೇಕೆಂದು ಹೇಳಿದಂತೆ ನಾವು ಪ್ರತಿಯೊಂದು ಜಿಲ್ಲೆಯಲ್ಲಿಯೂ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರಿಗೆ ಅಥಾರಿಟಿ ಎಂದು ನೇಮಿಸಿ, ಮೈಸೂರು ಹೈವೇ ಆಕ್ಟ್ ಏನಿದೆ ಅದರ ಪ್ರಕಾರ ನಾವು ಈಗಾಗಲೇ ಕ್ರಮಗಳನ್ನು ಅನುಸರಿಸಿದ್ದೇವೆ. ಈಗ ಈ ವಿಚಾರದಲ್ಲಿ ಡೆಮಾಲಿಶನ್ ಮಾಡಬೇಕೇ? ಮುಂತಾದ ಪ್ರಮುಕ ವಿಚಾರಗಳನ್ನು ಸಮಿತಿಯು ಸೂಕ್ತವಾಗಿ ಪರಿಶೀಲಿಸಿ ತನ್ನ ವರದಿಯನ್ನು ಸರಕಾರಕ್ಕೆ ಸಲ್ಲಿಸಲಿದೆ. ಅದನ್ನು ನೋಡಿದ ಮೇಲೆ ಸರಕಾರದವರು ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಕೆಲವು ನಗರಪ್ರದೇಶಗಳಲ್ಲಿ ಬೈಪಾಸ್ ರಸ್ತೆಯನ್ನು ಮಾಡುವುದಕ್ಕೆ ಸರಕಾರದವರು ಗಂಭೀರವಾಗಿ ಪರಿಶೀಲಿಸಬೇಕು. ಕೆಲವೊಂದು ತಾಲ್ಲೂಕು ಕೇಂದ್ರಗಳಲ್ಲಿ ಬಹಳ ಚಿಕ್ಕ ಚಿಕ್ಕ ಊರುಗಳಿವೆ. ಅವುಗಳು ಹಳೆಯ ಕಾಲದ ಊರುಗಳು. ಅಲ್ಲಿ ಒಂದೆರಡು ರಸ್ತೆಗಳು ಮಾತ್ರ ಇವೆ. ಅಲ್ಲಿ ಇವರು ರಸ್ತೆಗಳನ್ನು ಅಗಲ ಮಾಡುತ್ತೇವೆಂದು ಹೇಳಿದರೆ ಆ ಊರುಗಳೇ ಇರುವುದಿಲ್ಲ. ಹಾಗಾಗಿ ಬಳಹ ಗಂಭೀರವಾದಂಥ ಸಮಸ್ಯಗಳನ್ನು ಎದುರಿಸುವಂಥ ಪರಿಸ್ಥಿತಿಯು ಬರುತ್ತದೆ. ನನ್ನ ಕ್ಷೇತ್ರದಲ್ಲಿ ಎಲ್ಲಾಪುರ ಪಟ್ಟಣ ಪಂಚಾಯತ್ ಪ್ರದೇಶವೆಂದು ಬರುತ್ತದೆ..... ಆದ್ದರಿಂದ ಬೈಪಾಸ್ ಮಾಡುವ ಬಗ್ಗೆ ಸರಕಾರ ಏನು ವಿಚಾರ ಮಾಡಿದೆ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು. ಆ ಬಗ್ಗೆ ಇಂಥ ಸ್ಥಳಗಳ ಬಗ್ಗೆ ಸರಕಾರದ ಪರಿಶೀಲನತ ಏನು ಎಂದು ಹೇಳಿ....

ಶ್ರೀ ಧರ್ಮಸಿಂಗ್ : ನಾನು ಈಗಾಗಲೇ ಹೇಳಿದ್ದೇನೆ. ಇಂಟರ್ನಲ್ ಡಿಪಾರ್ಟಮೆಂಟ್ ಕಮಿಟಿಯನ್ನು ಅಡಿಷನಲ್ ಚೀಫ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಮಾಡಿದ್ದೇವೆ. ಅವರು ಸಮಗ್ರವಾದ ವರದಿಯನ್ನು ಕೊಡಲಿದ್ದಾರೆ. ಈಗಾಗಲೇ ನಾನು ಆಂಧ್ರಪ್ರದೇಶಕ್ಕೆ ಹೋಗಿ ಅಲ್ಲಿನ ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ಜೊಳಿಗೆ ಹಾಗೂ ಸಚಿವರ ಜೊತೆಗೆ ಚರ್ಚೆ ಮಾಡಿ ಬಂದಿದ್ದೇನೆ. ಅಲ್ಲಿ 1998ನೇ ಇಸವಿಯಲ್ಲಿ 145 ಮುನ್ಸಿಪಾಲಿಟಿ, ಕಾರ್ಪೊರೇಷನ್ ಪ್ರದೇಶಗಳಲ್ಲಿ ರಸ್ತೆಗಳನ್ನು ಅಗಲಗೊಳಿಸುವ ಕ್ರಮವನ್ನು ತೆಗೆದುಕೊಂಡಿದ್ದಾರೆ. ಅಲ್ಲಿ ಹೀಗೆ ಮಾಡುವಾಗ ಯಾವರೀತಿಯಾಗಿ ಕೊಟ್ಟಿದ್ದಾರೆ? ಯಾವ ರೀತಿಯ ಕ್ರಮಗಳನ್ನು ಈ ಕುರಿತು ಅವರು ಅನುಸರಿಸಿದ್ದಾರೆ? ಎನ್ನತಕ್ಕಂಥಾದ್ದನ್ನು ನಾವು ಚೆನ್ನಾಗಿ ಅಧ್ಯಯನ ಮಾಡಿ ಬಂದಿದ್ದೇವೆ. ನಮ್ಮ ಸಮಿತಿಯವರು ವರದಿಯನ್ನು ಸರಕಾರಕ್ಕೆ ಕೊಟ್ಟಮೇಲೆ ನಾವು ಅದರ ಬಗ್ಗೆ ನಿರ್ಧಾರವನ್ನು ತೆಗೆದುಕೊಳ್ಳುತ್ತೇವೆ. ಎಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಬೈಪಾಸ್ ರಸ್ತೆಗಳನ್ನು ಮಾಡುತ್ತಾ ಇದ್ದೇವೆ.

ಶ್ರೀ ಎ. ಪಾಪಣ್ಣ : ಮಾನ್ಯ ಅಧ್ಯಕ್ಷರೆ, ಬೈಪಾಸ್ ರಸ್ತೆಗಳು ಕೂಡ ಈಗ ಕಮರ್ಷಿಯಲ್ ಆಗುತ್ತಾ ಇವೆ. ಹುಣಸೂರಿನಲ್ಲಿ ಮೂರು ರಸ್ತೆಗಳು ಇವೆ. ಎರಡು ರಸ್ತೆಗಳು ಈಗಾಗಲೇ

ಕಮರ್ಷಿಯಲ್ ಆಗಿಬಿಟ್ಟಿದೆ. ಒಂದು ಬೈಪಾಸ್ ರಸ್ತೆ ಇದೆ, ಅದು ಕೂಡ ತುಂಬಾ ಕಮರ್ಷಿಯಲ್ ಆಗಿಬಿಟ್ಟಿದೆ. ಅಲ್ಲಿ ಬಾರ್‌ಗಳು ಹೋಟಲ್‌ಗಳು ಮುಂತಾಗಿ ಆಗಿ ತುಂಬಾ ಕಮರ್ಷಿಯಲ್ ಆಗಿ ತೊಂದರೆಯುಂಟಾಗುತ್ತಿದೆ. ಕಡೇಪಕ್ಷ ಬೈಪಾಸ್ ರಸ್ತೆಗಳಲ್ಲಾದರೂ ಅವು ಕಮರ್ಷಿಯಲ್ ಆಗದಿದ್ದ ಹಾಗೆ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ತಾವು ಮಾನ ಸಚಿವರ ಹತ್ತಿರ ಹೋಗಿ ಚರ್ಚಿಸಿ.

11.20 ಪಿ.ಎಂ

ಶ್ರೀ ಕೆ.ವಿ. ಅನುಸೂಯಮ್ಮ ನಟರಾಜನ್ : ಮಾನ್ಯ ಅಧ್ಯಕ್ಷರೆ, ನನ್ನ ಎರಡನೇ ಪ್ರಶ್ನೆಗೂ ಸರಿಯಾದ ಉತ್ತರ ಗೊತ್ತಾಗುತ್ತಿಲ್ಲ, ಅವರು ಹೇಳಬೇಕು; ಯಾಕೆಂದರೆ ನಬಾರ್ಡ್ ಯೋಜನೆಯಡಿ ಅನೇಕ ರಸ್ತೆಗಳಾಗುತ್ತಿವೆ. ಹೆಣ್ಣುಮಕ್ಕಳಿಗೇನೋ ಸ್ವರ್ಣಜಯಂತಿ, ಸ್ತ್ರೀಶಕ್ತಿ ಯೋಜನೆಗಳಡಿ ಕೆಲಸಗಳು ಸಿಗುತ್ತಿವೆ. ಆದರೆ ಗಂಡುಮಕ್ಕಳು ನಿರುದ್ಯೋಗಿಗಳಾಗಿದ್ದಾರೆ ಆದ್ದರಿಂದ ಲಾರಿ, ಬುಲ್‌ಡೋಜರ್ ಡ್ರೈವರ್‌ಗಳ ಹುದ್ದೆ ತುಂಬೇಕೆಂದು ಸವಿನಯ ಪ್ರಾರ್ಥನೆ.

ಶ್ರೀ ಧರ್ಮಸಿಂಗ್ : ಶ್ರೀಮತಿ ಅನುಸೂಯಮ್ಮನವರು ಕೇಳುತ್ತಿದ್ದಾರೆ, ಅದರ ಬಗ್ಗೆ ನಾನು ವಿಚಾರ ಮಾಡುತ್ತೇನೆ.

ಅಧ್ಯಕ್ಷರು : ನೀವು ಹೋಗಿ ಮಾನ್ಯ ಸಚಿವರ ಹತ್ತಿರ ಮಾತನಾಡಿ ಅವರು ಪರಿಶೀಲನೆ ಮಾಡುತ್ತಾರೆ.

ಚಿಕ್ಕಮಗಳೂರು ಜಿಲ್ಲೆ ಸಕ್ರೆಪಟ್ಟಣದಿಂದ ಬಾಣಾವರದವರೆಗೆ 22 ಕಿ.ಮಿ. ರಸ್ತೆಯನ್ನು ಅಗಲೀಕರಿಸುವುದು

126 (1464) ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಬೀರೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆ ಸಕ್ರೆಪಟ್ಟಣದಿಂದ ಬಾಣಾವರ ಗಡಿಯವರೆಗಿನ 22 ಕಿ.ಮೀ. ಲೋಕೋಪಯೋಗಿ ರಸ್ತೆ ತೀವ್ರ ಕಿರಿದಾಗಿದ್ದು, ಸಾರ್ವಜನಿಕರ ಹಾಗೂ ವಾಹನಗಳು ಓಡಾಡಲು ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಈ ರಸ್ತೆಯನ್ನು ಅಗಲೀಕರಿಸಿ (ವೈಡನಿಂಗ್) ದುರಸ್ತಿಗೊಳಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೆ; ಈ ಬಗ್ಗೆ (ಅಧಿಕಾರಿಗಳಿಂದ) ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆಯೇ; ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಈ ರಸ್ತೆಯ ಕೆಲವು ಭಾಗಗಳು ತೀವ್ರ ಕಿರಿದಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.